# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, **10 ಜುಲೈ, 2022** ಬೆಂಗಳೂರು, ಸಂಪುಟ 8, ಸಂಚಿಕೆ 3, ಪುಟಗಳು-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ
Kannada monthly, **10 July, 2022**, Bengaluru, Vol. 8, Issue No.3, Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500.
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್.

Subscription :Annual Rs. 30; Life : Rs. 500/-
Published by: Karnataka Vipassana Prachara Samiti Trust.

## ಧಮ್ಮ ಪದಗಳು

ನ ಕಹಾಪಣವಸ್ಸೇನ, ತಿತ್ತಿ ಕಾಮೇಸು ವಿಜ್ಜತಿ,
ಅಪ್ಪಸ್ಸಾದಾ ದುಕ್ಖಾ ಕಾಮ, ಇತಿ ವಿನ್ನಾಯ ಪಂಡಿತೋ.
ಅಪಿ ದಿಬ್ಬೇಸು ಕಾಮೇಸು, ರತಿಂ ಸೋ ನಾ' ಧಿಗಚ್ಛತಿ,
ತಣ್ಹಕ್ಖಯರತೋ ಹೋತಿ, ಸಮ್ಮಾಸಂಬುದ್ಧ ಸಾವಕೋ.

ಚಿನ್ನದ ನಾಣ್ಯಗಳ ಮಳೆಗರೆದರೂ ಇಂದ್ರಿಯ ಕಾಮನೆಗಳ ತೃಪ್ತಿ ಆಗುವುದಿಲ್ಲ. ಕಾಮಸುಖಗಳಿಂದ ಅಲ್ಪತೃಪ್ತಿ. ಆದರೆ ಅಪಾರ ದುಃಖ. ಅದನ್ನು ಅರಿತುಕೊಂಡು, ಜಾಣನಾದವನು ದಿವ್ಯವಾದ ಕಾಮ ಸುಖಗಳಲ್ಲಿ ಆನಂದಗೊಳ್ಳುವುದಿಲ್ಲ. ಸಮ್ಯಕ್ ಸಂಬುದ್ಧರ ಶಿಷ್ಯರು ತೃಷ್ಣೆಯ ನಾಶದಲ್ಲಿಯೇ ಆನಂದಪಡುತ್ತಾರೆ.

ಧಮ್ಮಪದ 186–187, ಬುದ್ಧವರ್ಗ

# ಅಶೋಕ ಚಕ್ರವರ್ತಿ ಮತ್ತು ಸಯಾಜಿ ಉ.ಬಾ. ಖಿನ್.

ಆಚಾರ್ಯ ಎಸ್.ಎನ್.ಗೋಯಂಕ (1924–2013)

(ಆಗಸ್ಟ್ 2011ರ ಇಂಗ್ಲಿಷ್ ವಿಪಶ್ಯನ ವಾರ್ತಾಪತ್ರದಿಂದ ಅನುವಾದಿಸಲಾಗಿದೆ)

ಬುದ್ಧರು ಮಹಾಪರಿನಿರ್ವಾಣ ಹೊಂದಿದ ಎರಡು ಶತಮಾನಗಳ ನಂತರ ಅಶೋಕ ಮಗಧ ಸಾಮ್ರಾಜ್ಯದ ಚಕ್ರವರ್ತಿಯಾದ. ಹದ್ದು ಮೀರಿದ ಹಿರಿಯಾಸೆಯಿಂದ ಪ್ರೇರೇಪಿತನಾಗಿ ಭಾರತದ ಬಹುಭಾಗ ಮತ್ತು ಅಕ್ಕಪಕ್ಕದ ದೇಶಗಳನ್ನೊಳಗೊಂಡ ವಿಶಾಲ ಸಾಮ್ರಾಜ್ಯವನ್ನು ಸ್ಥಾಪಿಸಿದ. ಆದರೆ ಒಂದು ರಾಜ್ಯ ಅವನ ಅಧೀನಕ್ಕೊಳಪಟ್ಟಿರಲಿಲ್ಲ; ಅದೇ ಕಳಿಂಗ, ಭಾರತದ ಈಗಿನ ಒಡಿಶಾ ರಾಜ್ಯ.

ಅದರ ಪ್ರತಿರೋಧದಿಂದ ಕೋಪೋದ್ರಿಕ್ತನಾದ ಅಶೋಕ ಕಳಿಂಗದ ಮೇಲೆ ಆಕ್ರಮಣ ಮಾಡಿ ರಕ್ತಪಾತದ ಯುದ್ಧದಲ್ಲಿ ಅದನ್ನು ವಶಪಡಿಸಿಕೊಂಡ. ನಂತರ, ಯುದ್ಧ ಮುಗಿದ ಮೇಲೆ, ಎಷ್ಟೊಂದು ಜನ ಅಮಾಯಕರು ಕೊಲ್ಲಲ್ಪಟ್ಟಿದ್ದಾರೆ ಮತ್ತು ಈ ಸಮೃದ್ಧ ದೇಶವು ಎಷ್ಟೊಂದು ಭಯಾನಕವಾದ ನೋವಿನಲ್ಲಿದೆ ಎಂಬುದನ್ನು ನೋಡಿದ. ತನ್ನ ಕ್ರಿಯೆಯಿಂದ ಮಾನಸಿಕವಾಗಿ ಕುಗ್ಗಿಹೋದ; ಖಡ್ಗ ತ್ಯಜಿಸುವ ತೀರ್ಮಾನ ಮಾಡಿದ.

ಈ ಸಮಯದಲ್ಲಿಯೇ ಅಶೋಕನು ಬುದ್ಧರ ಬೋಧನೆಗಳ ಬಗ್ಗೆ ತಿಳಿದು ಆಕರ್ಷಿತನಾದ. ಜ್ಞಾನೋದಯ ಪಡೆದವರ ಬೋಧನೆಗಳನ್ನು ಅಧ್ಯಯನ ಮಾಡಲು ಪ್ರಾರಂಭಿಸಿದ. ಆಗ ಯಾರೋ ಹೇಳಿದರು, ಬೋಧನೆಗಳ ಸರಿಯಾದ ಅರ್ಥವನ್ನು ತಿಳಿದುಕೊಳ್ಳಲು ಕೇವಲ ಗ್ರಂಥಗಳ ಅಧ್ಯಯನ ಸಾಕಾಗುವುದಿಲ್ಲ, ಅದು ಒಳನೋಟವನ್ನು ಬೆಳೆಸಿಕೊಳ್ಳುವುದರಿಂದ ಅಂದರೆ ವಿಪಶ್ಯನ ಭಾವನಾದಿಂದ, ವಿಪಶ್ಯನ ಧ್ಯಾನದಿಂದ ಸಾಧ್ಯ ಎಂದು.

ಆಗಿನ ಕಾಲದಲ್ಲಿ ವಿಪಶ್ಯನ ಧ್ಯಾನ ಕಲಿಯಲು ರಾಜಸ್ಥಾನ ರಾಜ್ಯದ ಬೈರತ್ ಅತ್ಯುತ್ತಮ ಸ್ಥಳವಾಗಿತ್ತು. ಅಲ್ಲಿ ಉಪಗುಪ್ತ ಎಂಬ ಹೆಸರಿನ ಭಿಕ್ಖುವು ವಿಪಶ್ಯನವನ್ನು ಕಲಿಸುತ್ತಿದ್ದರು. ಅಧಿಕಾರವನ್ನು ತನ್ನ ಅಧೀನ ಅಧಿಕಾರಿಗಳಿಗೆ ವಹಿಸಿ ಅಶೋಕನು ರಾಜಸ್ಥಾನಕ್ಕೆ ಪ್ರಯಾಣಿಸಿದ. 300 ದಿನಗಳಾದ ಮೇಲೆ ಸಂಪೂರ್ಣ ಬದಲಾದ ವ್ಯಕ್ತಿಯಾಗಿ ತನ್ನ ರಾಜಧಾನಿಗೆ ಹಿಂತಿರುಗಿದ. ಈಗ ಅವನ ಮಹದಾಶೆಯು ಬುದ್ಧರ ಬೋಧನೆಗಳನ್ನು ತನ್ನ ಸಾಮ್ರಾಜ್ಯದಾದ್ಯಂತ ಹರಡುವುದು ; 'ಏಹಿಪಸ್ಸಿಕೊ' ಗುಣದಿಂದ ಅಂದರೆ ಇತರರೂ ಬನ್ನಿ ಧರ್ಮದ ಲಾಭ ಪಡೆಯಿರಿ ಎಂಬ ಒಳ್ಳೆಯ ಗುಣದಿಂದ ಉತ್ತೇಜಿತನಾಗಿದ್ದ.

ಆಗಿನ್ನೂ ಮುದ್ರಣ ತಿಳಿದಿರಲಿಲ್ಲ. ಆದರೆ ಅಶೋಕನು ಬುದ್ಧರ ಬೋಧನೆಗಳನ್ನು ತನ್ನ ಪ್ರಜೆಗಳಿಗೆ ತಲುಪಿಸುವ ದೃಢನಿಶ್ಚಯ ಮಾಡಿದ್ದ. ಬೋಧನೆಗಳ ತಿರುಳನ್ನು ಪ್ರತಿಯೊಬ್ಬರೂ ನೋಡಲು ಸಾಧ್ಯವಾಗುವಂತೆ ಅವುಗಳನ್ನು ಕಲ್ಲಿನಲ್ಲಿ ಕೆತ್ತಿಸಲು ಆಜ್ಞಾಪಿಸಿದ. ಬುದ್ಧರು ಮಹಾಪರಿನಿರ್ವಾಣವಾಗಿ ಎರಡು ಶತಮಾನಗಳ ನಂತರ, ಮೂಲ ಬೋಧನೆಗಳನ್ನು ಯಾವುದೇ ರೀತಿಯಿಂದ ಬದಲಾಯಿಸುವ ಮೊದಲು ಈ ಕೆಲಸ ನಡೆಯಿತು. ಹಾಗಾಗಿ ಬುದ್ಧರ ಮೂಲ ಬೋಧನೆಗಳನ್ನು ನಾವು ಅಶೋಕನ ಶಿಲಾಶಾಸನಗಳಲ್ಲಿ ಕಾಣುತ್ತೇವೆ.

ಕೇವಲ ಗ್ರಂಥಗಳನ್ನು ಅಥವಾ ಸಿದ್ಧಾಂತವನ್ನು (ಪರಿಯತ್ತಿ) ಅಧ್ಯಯನ ಮಾಡುವುದಕ್ಕಿಂತ ಹೆಚ್ಚಾಗಿ ಬುದ್ಧರು ಅಭ್ಯಾಸಕ್ಕೆ(ಪಟಿಪತ್ತಿ) ಪ್ರಾಮುಖ್ಯತೆ ಕೊಟ್ಟರು. ಅದಕ್ಕಾಗಿಯೇ ಅಶೋಕನ ಶಿಲಾಶಾಸನಗಳು ಪದೇ ಪದೇ ವಿಪಶ್ಯನದ ಅಭ್ಯಾಸದ ಬಗ್ಗೆ ಪ್ರಸ್ತಾಪಿಸುತ್ತವೆ.

ಬುದ್ಧರು ಧಾರ್ಮಿಕ ಭಿನ್ನತೆಗಳನ್ನು ಲೆಕ್ಕಿಸದೆ ತಮ್ಮ ಬೋಧನೆಗಳನ್ನು ಎಲ್ಲರಿಗೂ ನೀಡಿದರು. ಅನೇಕ ಸಂದರ್ಭಗಳಲ್ಲಿ, ಅವರ ಕಡು ವಿರೋಧಿಗಳಾಗಿದ್ದವರು ಅವರು ಬೋಧಿಸುವುದನ್ನು ಕಲಿತ ಮೇಲೆ ಅವರ ಉತ್ಸಾಹಪೂರಿತ ಸಮರ್ಥಕರಾದರು. ಪ್ರಾಚೀನ ಭಾರತದಲ್ಲಿ ಸಮಣರು ಮತ್ತು ಬ್ರಾಹ್ಮಣರು ಎಂದು ಎರಡು ಸಮುದಾಯಗಳಿದ್ದವು. ಬುದ್ಧರು ಧರ್ಮದ ಅಭ್ಯಾಸದಲ್ಲಿ ಎಲ್ಲಾ ಪಂಥದವರನ್ನೂ ಒಟ್ಟುಗೂಡಿಸುವ ಪ್ರಯತ್ನ ಮಾಡಿದರು. ಅದೇ ರೀತಿ ಅಶೋಕನು ಸಮಣರು ಮತ್ತು ಬ್ರಾಹ್ಮಣರ ಮಧ್ಯೆ ಯಾವುದೇ ವ್ಯತ್ಯಾಸವನ್ನು ಮಾಡಲಿಲ್ಲ. ಅವನು ಈ ಎರಡು ಸಮುದಾಯದವರಿಗೂ ದಾನ ಕೊಟ್ಟ ಮತ್ತು ಇತರರೂ ಹಾಗೆಯೇ ಮಾಡುವಂತೆ ಪ್ರೋತ್ಸಾಹಿಸಿದ.

ವಾಸ್ತವವಾಗಿ, ವಿಪಶ್ಯನದ ಅಭ್ಯಾಸದಿಂದ ಎರಡು ಸಮುದಾಯಗಳ ಮಧ್ಯದ ತಾರತಮ್ಯಗಳು ಮುಸುಕಾಗಲು ಆರಂಭಿಸಿ ಅವರು ಸಾಮರಸ್ಯದಿಂದ ಕೂಡಿ ಬಾಳಿದರು. ಅಶೋಕನ ಆಳ್ವಿಕೆಯಲ್ಲಿ ಕೋಮು ಸಂಘರ್ಷ ಅಥವಾ ಕಲಹಗಳಿರಲಿಲ್ಲ.

ಅಶೋಕನು ಎಲ್ಲಾ ಸಮುದಾಯಗಳೂ ವಿಪಶ್ಯನದಲ್ಲಿ ಆಸಕ್ತಿ ವಹಿಸುವಂತೆ ಪ್ರಯತ್ನಿಸಿದ. ವಿಪಶ್ಯನವನ್ನು ಯಾವುದೇ ಒಂದು ಸಮುದಾಯದ ಏಕಸ್ವಾಮ್ಯ ಮಾಡದ, ಅದು ಎಲ್ಲರಿಗೂ ಸೇರಿದ್ದು ಎಂಬುದನ್ನು ತೋರಿಸಿದ. ಅದು ಸಾರ್ವತ್ರಿಕವಾದುದು.

ತಮ್ಮ ಪರಿಶುದ್ಧವಾದ, ಪಂಥರಹಿತವಾದ ಬೋಧನೆಯನ್ನು ನೀಡಲು ಬುದ್ಧರು ತಮ್ಮ ಶಿಷ್ಯರನ್ನು ವಿವಿಧ ದಿಕ್ಕುಗಳಿಗೆ ಕಳುಹಿಸಿದರು. ಇದರ ಪ್ರತಿಫಲವಾಗಿ ಧರ್ಮವು ಉತ್ತರ ಭಾರತದ ಉದ್ದಗಲಕ್ಕೆ ಹರಡಿ

ಬಹುಜನರಿಗೆ ಸುಖವನ್ನು ತಂದಿತು. ಪ್ರತಿಯೊಂದು ಪ್ರಧಾನ ಮತಶ್ರದ್ಧೆಯ ಜನರು ಬುದ್ಧರ ಬೋಧನೆಗಳ ಸಂಪರ್ಕಕ್ಕೆ ಬಂದಿದ್ದಾರೆ ಮತ್ತು ಉತ್ತಮರಾಗಿ ಬದಲಾಗಿದ್ದಾರೆ.

ಎಲ್ಲ ಧಾರ್ಮಿಕ ಹಿನ್ನೆಲೆಯ ಜನರನ್ನು ಸದಾಚಾರದ ಜೀವನ ಮಾರ್ಗಕ್ಕೆ ತರಲು ಅವರನ್ನು ವಿಪಶ್ಯನ ಕಲಿಯಲು ಮತ್ತು ಅದರಲ್ಲಿ ಅಭಿವೃದ್ಧಿ ಹೊಂದಲು ಅಶೋಕ ಚಕ್ರವರ್ತಿಯು ಪ್ರೋತ್ಸಾಹಿಸುತ್ತಿದ್ದ. ಸಂಘದ ಸದಸ್ಯರನ್ನು ಮತ್ತು ಸಾಮಾನ್ಯ ಮಹಿಳಾ ಮತ್ತು ಪುರುಷ ಆಚಾರ್ಯರುಗಳನ್ನು ನೇಮಿಸಿದ. ಎಲ್ಲರೂ ಭಾರತದಾದ್ಯಂತ ವಿಪಶ್ಯನವನ್ನು ಕಲಿಸಲು ಪ್ರಾರಂಭಿಸಿದರು. ಆಧುನಿಕ ಕಾಲದಲ್ಲಿಯೂ ನನ್ನ ಗೌರವಾನ್ವಿತ ಆಚಾರ್ಯರಾದ ಸಯಾಜಿ ಉ ಬಾ ಖಿನ್‌ರವರು ಮ್ಯಾನ್ಮಾರ್‌ನ ಬುದ್ಧರ ಅನುಯಾಯಿಗಳಿಗೆ ಮತ್ತು ವಿವಿಧ ಹಿನ್ನೆಲೆಯ ಅನೇಕ ಜನರಿಗೆ ವಿಪಶ್ಯನವನ್ನು ಕಲಿಸಿದರು.

ತನ್ನ ಸಾಮ್ರಾಜ್ಯದ ಉದ್ದಗಲಕ್ಕೂ ಬುದ್ಧರಿಗೆ ಸ್ಮಾರಕಗಳನ್ನು ಅಥವಾ ಬೌದ್ಧ ವಿಹಾರಗಳನ್ನು ಸ್ಥಾಪಿಸಲು ಅಶೋಕ ತೀರ್ಮಾನಿಸಿದ. ನಂತರ ಈ ಪ್ರಶಾಂತವಾದ, ಪರಿಶುದ್ಧ ಜಾಗಗಳಲ್ಲಿ ವಾಸಿಸಲು ಬೌದ್ಧ ಭಿಕ್ಷುಗಳು ಬಂದರು. ಈ ಸ್ಥಳಗಳು ಧರ್ಮ ಬೋಧನೆಗೆ ಆದರ್ಶಪ್ರಾಯವಾದ ಸ್ಥಳಗಳಾಗಿದ್ದವು.

ಜೈಲಿನ ಕೈದಿಗಳು ಪರಿವರ್ತನೆಯಾಗಲಿ ಎಂಬ ಅನುಕಂಪದಿಂದ ಅಶೋಕ ಚಕ್ರವರ್ತಿಯು ಅವರಿಗೆ ವಿಪಶ್ಯನ ಬೋಧಿಸುವಂತೆ ನೋಡಿಕೊಂಡ. ಆಧುನಿಕ ಕಾಲದಲ್ಲಿ ಸಹ ಭಾರತ, ಮ್ಯಾನ್ಮಾರ್, ಅಮೇರಿಕ ಮತ್ತಿತರ ದೇಶಗಳ ಕೈದಿಗಳು ವಿಪಶ್ಯನ ಧ್ಯಾನದಿಂದ ಅವರ ಜೀವನವನ್ನು ಬದಲಾಯಿಸಿಕೊಳ್ಳುವ ಅವಕಾಶವನ್ನು ಪಡೆದಿದ್ದಾರೆ.

ಇರಾನ್, ಇರಾಕ್, ಈಜಿಪ್ಟ್ ಮತ್ತು ಯೂರೋಪ್ ನಂತಹ ದೂರ ದೇಶಗಳಿಗೂ ಬುದ್ಧರ ಬೋಧನೆಗಳನ್ನು ತಲುಪಿಸಲು ಅಶೋಕ ಚಕ್ರವರ್ತಿಯು ಕಾರಣೀಭೂತನಾದ. ಈ ದೇಶಗಳಲ್ಲಿ ಧರ್ಮದ ನೆನಪು ಮಾಸಿಹೋಗಿದೆ. ಶ್ರೀಲಂಕಾ, ಮ್ಯಾನ್ಮಾರ್, ಥೈಲ್ಯಾಂಡ್, ಕಾಂಬೋಡಿಯ ಮತ್ತು ಲಾವೋಸ್‌ನಂತಹ ಏಷ್ಯಾ ಖಂಡದ ದೇಶಗಳ ಕಥೆಯು ಬೇರೆಯೇ ಆಗಿದೆ. ಅಶೋಕ ಚಕ್ರವರ್ತಿಯ ಸಹಾಯದಿಂದ ಈ ದೇಶಗಳಲ್ಲಿ ಧರ್ಮವು ಆಳವಾಗಿ ಬೇರುಬಿಟ್ಟು ಇಂದಿಗೂ ಬೆಳವಣಿಗೆ ಹೊಂದುತ್ತಿದೆ.

ನೆರೆಯ ದೇಶಗಳನ್ನು ಜಯಿಸಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸುವ ಸೇನಾಬಲ ಅಶೋಕನ ಬಳಿಯಿತ್ತು. ಆದರೆ ಜನರು ಒಳ್ಳೆಯ ಜೀವನ ನಡೆಸಲಿ ಎಂದು ಅವನು ಧರ್ಮ ಸಾಮ್ರಾಜ್ಯವನ್ನು ವಿಸ್ತರಿಸುವ ಆಯ್ಕೆ ಮಾಡಿಕೊಂಡ. ಈ ರೀತಿ ಮಾಡುವ ಮೂಲಕ ಅವನು ಎಲ್ಲರ ಹೃದಯಗಳನ್ನೂ ಗೆದ್ದ.

ಶತಮಾನಗಳು ಕಳೆದಂತೆ ಕೆಲವು ದೇಶಗಳಲ್ಲಿ ಬುದ್ಧರ ಬೋಧನೆಗಳು ಅಶೋಕನು ಕಳುಹಿಸಿದ ಮೂಲ, ವಿಶ್ವಾಸಾರ್ಹ ರೂಪದಲ್ಲಿ ಉಳಿಯಲಿಲ್ಲ. ಆದರೆ ಮ್ಯಾನ್ಮಾರ್ ದೇಶದ ಜನರು ಬುದ್ಧರ ಬೋಧನೆಯ ಸೈದ್ಧಾಂತಿಕ ಭಾಗ ಮತ್ತು ವಿಪಶ್ಯನ ಧ್ಯಾನ ಸಾಧನೆಯನ್ನು ಪೀಳಿಗೆಯಿಂದ ಪೀಳಿಗೆಗೆ ಅವುಗಳ ಪರಿಶುದ್ಧ ರೂಪದಲ್ಲಿ ರಕ್ಷಿಸಿದರು. ಕೊನೆಯ ಪಕ್ಷ ಕೆಲವು ಜನರಲ್ಲಿ, ಸಿದ್ಧಾಂತ ಮತ್ತು ಅಭ್ಯಾಸ ಎರಡೂ ಗುರುವಿನಿಂದ ಶಿಷ್ಯನಿಗೆ ಅಶೋಕನು ಕಳುಹಿಸಿದ ಪರಿಶುದ್ಧ ರೂಪದಲ್ಲಿ ವರ್ಗಾಯಿಸಲ್ಪಟ್ಟವು.

ಆಧುನಿಕ ಕಾಲದಲ್ಲಿ ಪೂಜ್ಯ ಲೇಡಿ ಸಯಾದೋರವರು ಧರ್ಮದ ಗೃಹಸ್ಥ ಆಚಾರ್ಯರುಗಳ ಪ್ರಾಚೀನ ಪರಂಪರೆಯನ್ನು ಪುನರುಜ್ಜೀವನಗೊಳಿಸಲು ತೀರ್ಮಾನಿಸಿದರು. ಬುದ್ಧರ ಕಾಲದ ನಂತರ 2500 ವರ್ಷಗಳಾದ ಮೇಲೆ ಧರ್ಮವು ಮತ್ತೊಂದು 2500 ರವರೆಗೆ ಪುನರುಜ್ಜೀವಿತವಾಗುತ್ತದೆ ಎಂಬ ಸಾಮಾನ್ಯ ನಂಬಿಕೆಯಿತ್ತು. ಈ ಕ್ಷಣಕ್ಕೆ ತಯಾರುಮಾಡಲು, ಲೇಡಿ ಸಯಾದೋರವರು ಸಯಾ ಥೆಟ್‌ಜೀ ಯವರನ್ನು ತರಬೇತುಗೊಳಿಸಿದರು ಮತ್ತು ಅವರನ್ನು ಧರ್ಮದ ಪ್ರಥಮ ಆಚಾರ್ಯರನ್ನಾಗಿ ನೇಮಿಸಿದರು. ಸಯಾ ಥೆಟ್‌ಜಿಯವರು ಗೃಹಸ್ಥರಿಗೆ ಮತ್ತು ಕೆಲವು ಭಿಕ್ಷುಗಳಿಗೆ ವಿಪಶ್ಯನದ ಅಭ್ಯಾಸವನ್ನು ಬೋಧಿಸಿದರು.

ಸಯಾ ಥೆಟ್‌ಜಿಯವರ ನಂತರ ಆಚಾರ್ಯ ಪರಂಪರೆ ಸರಪಳಿಯ ನಂತರದ ಕೊಂಡಿಯೇ ನನ್ನ ಸ್ವಂತ ಆಚಾರ್ಯರಾದ ಸಯಾಜಿ ಉ ಬಾ ಖಿನ್‌ರವರು. ಅವರಲ್ಲಿ ಬುದ್ಧ ಮತ್ತು ಅಶೋಕ ಇಬ್ಬರ ಕ್ಷಣದರ್ಶನವನ್ನು ನಾವು ನೋಡುತ್ತೇವೆ. ಅವರ ಪ್ರವಚನಗಳಲ್ಲಿ ಅವರು ಪರಿಯತ್ತಿಯ ಬಗೆಗೆ (ಸೈದ್ಧಾಂತಿಕ ಅಂಶ) ವಿಸ್ತೃತವಾಗಿ ಮಾತಾಡುತ್ತಿದ್ದರು. ಆದರೆ ಅವರ ವಿಪಶ್ಯನ ಶಿಬಿರಗಳಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೆ ವಿಪಶ್ಯನದ ಅಭ್ಯಾಸಕ್ಕೇ ಒತ್ತುಕೊಡುತ್ತಿದ್ದರು.

ವ್ಯಕ್ತಿಗಳ ಹಿನ್ನೆಲೆ ಏನೇ ಇರಲಿ ಒಬ್ಬ ಆಚಾರ್ಯರಾಗಿ ಸಯಾಜಿಯವರು ಅವರಲ್ಲಿ ಭಿನ್ನಭೇದ ಮಾಡುತ್ತಿರಲಿಲ್ಲ. ಇತರೆ ಧಾರ್ಮಿಕ ಗುಂಪಿನ ಬಗ್ಗೆ ಅವರು ವಿಮರ್ಶಾತ್ಮಕವಾಗಿ ಎಂದೂ ಮಾತಾಡಲಿಲ್ಲ. ಬದಲಾಗಿ, ಪ್ರತಿಯೊಂದು ಗುಂಪಿನ ಬೋಧನೆಗಳನ್ನು ಧರ್ಮದ ದೃಷ್ಟಿಕೋನದಿಂದ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರು ಮತ್ತು ಬುದ್ಧರ ಮಾತುಗಳ ಬೆಳಕಿನಲ್ಲಿ ವ್ಯಾಖ್ಯಾನಿಸುತ್ತಿದ್ದರು.

ಒಮ್ಮೆ ಅಮೆರಿಕದ ಪ್ರಸಿದ್ಧ ಬರಹಗಾರ ಕ್ರಿಶ್ಚಿಯನ್ ಪಾದ್ರಿಯೊಬ್ಬರು ಸಯಾಜಿಯವರ (ವಿಪಶ್ಯನ ಧ್ಯಾನ) ಶಿಬಿರಕ್ಕೆ ಸೇರಿದರು. ವಾಡಿಕೆಯಂತೆ, ತ್ರಿರತ್ನಗಳಲ್ಲಿ ಅಂದರೆ ಬುದ್ಧ, ಧಮ್ಮ ಮತ್ತು ಸಂಘದಲ್ಲಿ ಶರಣು ಹೋಗುವುದು ಮೊದಲನೆಯ ಹೆಜ್ಜೆ. ಇದಕ್ಕೆ ಬದಲಾಗಿ ಜೀಸಸ್‌ರಲ್ಲಿ ಶರಣು ಹೋಗಲು ನಾನು ಇಚ್ಛಿಸುತ್ತೇನೆ ಎಂದು ಹೇಳುತ್ತಾ ಈ ಅಮೆರಿಕನ್ನರು ತ್ರಿರತ್ನಗಳಲ್ಲಿ ಶರಣು ಹೋಗುವುದನ್ನು ನಿರಾಕರಿಸಿದರು.

ಸಯಾಜಿಯವರು ನಸುನಗುತ್ತಾ, "ಬಹಳ ಒಳ್ಳೆಯದು, ಅದನ್ನು ಮಾಡಿ. ಅಷ್ಟಕ್ಕೂ, ಬುದ್ಧರು ಸ್ವರ್ಗದಲ್ಲಿ ಕುಳಿತು ತನ್ನಲ್ಲಿ ಶರಣು ಹೋಗುವವರ ಕೋರಿಕೆಗಳನ್ನು ಪೂರೈಸಲು ಕಾಯುತ್ತಿಲ್ಲ. ನಿಜವಾಗಿಯೂ ಶರಣು ಹೋಗುವುದು ಅವರ ಗುಣಗಳಲ್ಲಿ.. ಜೀಸಸರು ಕೂಡ ಅದ್ಭುತವಾದ ಅನೇಕ ಗುಣಗಳನ್ನು ಹೊಂದಿದ್ದರು. ಅವರ ಆದರ್ಶದಿಂದ ಉತ್ತೇಜನ ಪಡೆಯಿರಿ ಮತ್ತು ನಿಮ್ಮ ಜೀವನದಲ್ಲಿ ಅವರನ್ನು ಅನುಕರಿಸಲು ಪ್ರಯತ್ನಿಸಿ. ಜೀಸಸರಲ್ಲಿ ಶರಣು ಹೋಗುವುದಾದರೆ, ಅವರ ಗುಣಗಳಿಗೆ ಶರಣಾಗಿ, ಜೀಸಸ್ ಎಂಬ ವ್ಯಕ್ತಿಗಲ್ಲ" ಎಂದು ಹೇಳಿದರು.

ಈ ವ್ಯಕ್ತಿಯು ಒಪ್ಪಿ ಕೆಲಸ ಮಾಡಲು ಪ್ರಾರಂಭಿಸಿದರು.ಶಿಬಿರವು ಮುಗಿದಾಗ ಸಯಾಜಿಯವರ ಬಳಿ ಬಂದು ಪ್ರಾರಂಭಿಕ ಪ್ರತಿರೋಧಕ್ಕಾಗಿ ಕ್ಷಮೆಯಾಚಿಸಿದರು. ಪರಿಶುದ್ಧ ಧರ್ಮವು ಧರ್ಮಗಳ ಮಧ್ಯೆ ಇರುವ ಎಲ್ಲಾ ವ್ಯತ್ಯಾಸಗಳನ್ನು ದಾಟುತ್ತದೆ ಎಂಬುದನ್ನು ಅನುಭವದಿಂದ ಅರಿತರು.

ಈ ಸಂಪ್ರದಾಯದ ಮುಖ್ಯವಾದ ಒಂದು ಮೂಲತತ್ವವೆಂದರೆ ಧರ್ಮ ಬೋಧನೆಗೆ ಯಾವುದೇ ಬೆಲೆ ನಿಗದಿಮಾಡಲು ಸಾಧ್ಯವಿಲ್ಲ, ಏಕೆಂದರೆ ವಾಸ್ತವವಾಗಿ ಅದು ಬೆಲೆಕಟ್ಟಲಾಗದ್ದು. ಧರ್ಮವನ್ನು ಬೋಧಿಸಿ ಹಣ ಗಳಿಸುವುದು ಅನೈತಿಕ ಮತ್ತು ಸಂಪೂರ್ಣವಾಗಿ ನಿಷಿದ್ಧ. ಯಾರಾದರೂ ಹಣ ಸಂಪಾದಿಸ ಬಯಸಿದರೆ, ಬೇಕಾದಷ್ಟು ವ್ಯಾಪಾರದ ಅವಕಾಶಗಳಿವೆ. ಆದರೆ ಧರ್ಮವು ವ್ಯಾಪಾರದ ವಸ್ತುವಲ್ಲ, ಮಾರಾಟಕ್ಕಿರುವ ವಸ್ತುವಲ್ಲ. ಒಬ್ಬ ವ್ಯಾಪಾರಸ್ಥನು ತನ್ನ ಕೆಲಸದಿಂದ ಹಣ ಸಂಪಾದಿಸಿ ಶ್ರೀಮಂತನಾಗುತ್ತಾನೆ. ಆದರೆ ಧರ್ಮ ಬೋಧಕರು ಧರ್ಮ ಬೋಧನೆಗೆ ಶುಲ್ಕ ವಿಧಿಸಿ ಎಂದಿಗೂ ಸಂಪತ್ತನ್ನು ಗಳಿಸಬಾರದು. ಈ ಸಂಪ್ರದಾಯವು ಬುದ್ಧರ ಈ ಕೆಳಗಿನ ಆಣತಿಯನ್ನು ಚಾಚೂ ತಪ್ಪದೆ ಅನುಸರಿಸುತ್ತದೆ.

***ಧಮ್ಮೇನ ನ ವನಂ ಚರೇ***

***ಧಮ್ಮವನ್ನು ವ್ಯಾಪಾರವನ್ನಾಗಿ ಮಾಡಬೇಡ***

ಈ ಆದೇಶವನ್ನು ಕಡೆಗಣಿಸುವ ಯಾರೇ ಆದರೂ ಧರ್ಮವನ್ನು ಬೋಧಿಸುವುದಿಲ್ಲ, ಅದಕ್ಕೆ ವಿರುದ್ಧವಾದುದನ್ನು ಬೋಧಿಸುತ್ತಾರೆ.

ಅಶೋಕ ಚಕ್ರವರ್ತಿಯ ಆಳ್ವಿಕೆಯಲ್ಲಿ ಧರ್ಮವು ಪರಿಶುದ್ಧ ರೂಪದಲ್ಲಿತ್ತು. ಆದರೆ ಧರ್ಮವು ಹರಡಿದಂತೆ ಇತರೆ ಸಂಪ್ರದಾಯಗಳ ಕೆಲವು ಪುರೋಹಿತರುಗಳಿಗೆ ಹಣಕಾಸಿನ ನಷ್ಟವಾಯಿತು. ಆದ್ದರಿಂದ ಅವರು ಬೋಧನೆಯು ಕಲುಷಿತವಾಗುವಂತಹ ಬದಲಾವಣೆಗಳನ್ನು ಪರಿಚಯಿಸಲು ಪ್ರೇರೇಪಿತರಾದರು. ಇದರ ಪರಿಣಾಮವಾಗಿ 2000 ವರ್ಷಗಳ ಹಿಂದೆ ಧರ್ಮವು ಅದರ ಪರಿಶುದ್ಧತೆಯನ್ನು ಕಳೆದುಕೊಂಡಿತು. ಕಡಿಮೆ ಸಂಖ್ಯೆಯ ಪುರೋಹಿತರು ಮಾತ್ರ ಈ ಅವನತಿಗೆ ಕಾರಣರಾದರು. ಆದ್ದರಿಂದ ಇಡೀ ಸಮುದಾಯವನ್ನು ದೂರುವುದು ಸಂಪೂರ್ಣವಾಗಿ ತಪ್ಪು. ಪ್ರತಿಯೊಂದು ಸಮುದಾಯದಲ್ಲೂ ಪರಿಶುದ್ಧ ಹೃದಯದ ಜನರಿರುತ್ತಾರೆ.

ನನ್ನ ಪೂಜ್ಯ ಆಚಾರ್ಯರು ಪರಿಪೂರ್ಣವಾಗಿ ಧರ್ಮದ ಆದರ್ಶ ಜೀವನವನ್ನು ನಡೆಸಿದರು. ಅವರು ನಾಗರಿಕ ಸೇವೆಯ ಹಿರಿಯ ಅಧಿಕಾರಿಯಾಗಿದ್ದರು. ಇಲ್ಲಿ ಒಳಮಾರ್ಗಗಳಿಂದ ಹಣ ಗಳಿಸುವುದು ಸರ್ವೇಸಾಮಾನ್ಯ. ಆದರೆ ಸಯಾಜಿಯವರು ಧರ್ಮದಲ್ಲಿ ಪರಿಪಕ್ವವಾಗಿದ್ದರು. ಈ ಭ್ರಷ್ಟ ವಾತಾವರಣದಲ್ಲಿ ಅವರು ಕೆಲಸ ಮಾಡಿದರು ಮತ್ತು ಯಾವುದೇ ಕಳಂಕವಿಲ್ಲದೆ ಹೊರಬಂದರು.

ಸಯಾಜಿಯವರು ಒಂದು ಬಿಡಿಗಾಸನ್ನೂ ತನ್ನ ವಿದ್ಯಾರ್ಥಿಗಳಿಂದ ಸ್ವೀಕರಿಸುತ್ತಿರಲಿಲ್ಲ. ಶಿಬಿರ ಮುಗಿದ ಮೇಲೆ ನಾವು ಏನನ್ನಾದರೂ ಕೊಟ್ಟಾಗ ಅವರು ಧ್ಯಾನ ಕೇಂದ್ರದ ಮ್ಯಾನೇಜರ್‌ರವರನ್ನು ಕರೆದು ಈ ದಾನವು ಧ್ಯಾನ ಕೇಂದ್ರಕ್ಕೆ ಸೇರಬೇಕು, ಇದಕ್ಕೊಂದು ರಶೀದಿ ಕೊಡಿ ಎಂದು ಹೇಳುತ್ತಿದ್ದರು. ಸಾಲ ಸ್ವೀಕರಿಸುವಾಗಲೂ ಅತಿಜಾಗರೂಕ ರಾಗಿರುತ್ತಿದ್ದರು.

ಸಯಾಜಿಯವರಿಗೆ ಕೆಟ್ಟ ಸ್ಥಿತಿಯಲ್ಲಿದ್ದ ಒಂದು ಚಿಕ್ಕ ಮನೆಯಿತ್ತು. ತನ್ನ ಮಕ್ಕಳು ಅಲ್ಲಿ ವಾಸಿಸಲಿ ಎಂದು ಅವರು ನಿವೃತ್ತಿ ಹೊಂದುವ ಮೊದಲು ಅದನ್ನು ದುರಸ್ತಿ ಮಾಡಿಸಬಯಸಿದರು. ನಿರ್ಮಾಣಗಾರನು ದುರಸ್ತಿಗೆ ಒಂದು ಬೆಲೆಯನ್ನು ನಮೂದಿಸಿದ. ಅದು ಸಯಾಜಿಯವರ ಸಂಪಾದನೆಗಿಂತ ಹೆಚ್ಚಾಗಿತ್ತು. ಆದರೆ ನನಗೆ ಅದು ಅಲ್ಪ ಮೊತ್ತವಾಗಿತ್ತು. ಸಯಾಜಿಯವರು ಎಂದಿಗೂ ಹಣಕಾಸಿನ ನೆರವನ್ನು ಕೇಳುತ್ತಿರಲಿಲ್ಲ. ಆದ್ದರಿಂದ ಬಹಳ ವಿನಮ್ರತೆಯಿಂದ ನಾನು ಆ ಮೊತ್ತವನ್ನು ಕೊಡುಗೆಯಾಗಿ ನೀಡಲು ಮುಂದಾದೆ. ಹಿಂದು ಮುಂದು ಯೋಚಿಸದೆ ಸಯಾಜಿಯವರು, ವಿದ್ಯಾರ್ಥಿಯಿಂದ ಸಣ್ಣ ಮೊತ್ತವನ್ನೂ ಸ್ವೀಕರಿಸುವುದು ಧರ್ಮ ಬೋಧಕರಿಗೆ ತಕ್ಕುದಲ್ಲ, ದಾನವು ಯಾವಾಗಲೂ ಧ್ಯಾನ ಕೇಂದ್ರಕ್ಕೆ, ಧರ್ಮಕ್ಕೆ ಎಂದು ಹೇಳಿ ನಿರಾಕರಿಸಿದರು. “ಒಳ್ಳೆಯದು, ನಾನು ನಿಮಗೆ ಸಾಲದ ರೂಪದಲ್ಲಿ ಕೊಡುತ್ತೇನೆ, ನಿಮಗೆ ಅನುಕೂಲವಾದಾಗ ಹಿಂದಿರುಗಿಸಿ” ಎಂದು ನಾನು ಹೇಳಿದೆ. ಒಲ್ಲದ ಮನಸ್ಸಿನಿಂದ ಒಪ್ಪಿದರು, ನಿರ್ಮಾಣಗಾರ ಕೆಲಸವನ್ನು ಪ್ರಾರಂಭಿಸಿದ.

ಸಯಾಜಿಯವರು ಸೇವೆಯಲ್ಲಿದ್ದಾಗ, ಅವರ ಸಂಬಳದಿಂದ ನನಗೆ ಹಿಂದಿರುಗಿಸುತ್ತಿದ್ದರು. ಅವರು ನಿವೃತ್ತಿ ಹೊಂದಿದಾಗ ಇನ್ನೂ ಸ್ವಲ್ಪ ಮೊತ್ತವನ್ನು ಕೊಡಬೇಕಾಗಿತ್ತು. ಇದನ್ನು ಅವರು ತಮಗೆ ಬರುತ್ತಿದ್ದ ಅಲ್ಪ ನಿವೃತ್ತಿ ವೇತನದಿಂದ ಮಾತ್ರ ಕೊಡಬಹುದಾಗಿತ್ತು. ಪಿಂಚಣಿಯ ಚೆಕ್ ಬಂದಾಗ ತಮಗಾಗಿ ಏನನ್ನೂ ಇಟ್ಟುಕೊಳ್ಳದೆ ಇಡೀ ಮೊತ್ತವನ್ನು ನನಗೆ ಕಳುಹಿಸುತ್ತಿದ್ದರು. ಈ ಹಣವನ್ನು ಸ್ವೀಕರಿಸುವುದು ನನಗೆ ಬಹಳ ನೋವಿನ ಸಂಗತಿಯಾಗಿತ್ತು. ಅಷ್ಟಕ್ಕೂ ಅವರಿಗೆ ಹಣದ ಅವಶ್ಯಕತೆ ನನಗಿಂತಲೂ ಹೆಚ್ಚಿತ್ತು. ಆದರೆ ಧರ್ಮದ ನಿಯಮಗಳನ್ನು ಎತ್ತಿ ಹಿಡಿಯಬೇಕಾಗಿತ್ತು. ಮನಸ್ಸಿನಲ್ಲದ ಮನಸ್ಸಿನಿಂದ ಈ ಮರುಪಾವತಿಯನ್ನು ನಾನು ಸ್ವೀಕರಿಸುತ್ತಿದ್ದೆ ; ಸಯಾಜಿಯವರ ಬಳಿ ಹಣವೇ ಉಳಿಯುತ್ತಿರಲಿಲ್ಲ.

ಇದೇ ಸಮಯದಲ್ಲಿ ನನ್ನ ಸಾಕು ತಾಯಿಯು ಸಾವಿನ ಅಂಚಿನಲ್ಲಿದ್ದರು. ಸಯಾಜಿಯವರ ಮಾರ್ಗದರ್ಶನದಲ್ಲಿ ಅವರು ಏಳು ವರ್ಷಗಳ ಕಾಲ ಧ್ಯಾನದ ಅಭ್ಯಾಸ ಮಾಡಿದ್ದರು ಮತ್ತು ಸಯಾಜಿಯವರಿಗೂ ಅವರ ಬಗ್ಗೆ ಮಮತೆಯಿತ್ತು. ಅಂತಿಮ ಕೆಲಸವಾಗಿ ಅನೇಕ ಸಾರ್ವಜನಿಕ ದತ್ತಿ ಸಂಸ್ಥೆಗಳಿಗೆ ದಾನ ನೀಡಲು ನಿರ್ಧರಿಸಿದರು. ದಾನ ಸ್ವೀಕರಿಸುವವರ ಪಟ್ಟಿಯಲ್ಲಿ ಸಯಾಜಿಯವರ ಹೆಸರನ್ನೂ ಸೇರಿಸಬಯಸಿದರು. ಅವರ ಆಲೋಚನಾಶೀಲ ಕ್ರಿಯೆಯಿಂದ ನನಗೆ ಬಹಳ ಸಂತೋಷವಾಯಿತು ; ಇದು ನನ್ನ ಆಚಾರ್ಯರನ್ನು ಸಾಲಮುಕ್ತ ಮಾಡುತ್ತದೆ ಎಂದು ಭಾವಿಸಿದೆ. ಆದರೆ ನಾನು ಹಣವನ್ನು ಸಯಾಜಿಯವರಿಗೆ ನೀಡಿದಾಗ, ಅವರು ನನ್ನ ತಾಯಿಯನ್ನು ಹರಸಿದರು ಮತ್ತು ತಮ್ಮ ಸಹಾಯಕನನ್ನು ಬರಹೇಳಿ, ಮಾರನೆಯ ದಿನ ಭಿಕ್ಖುಗಳನ್ನು ಕರೆದು ನನ್ನ ತಾಯಿಯ ಕೊಡುಗೆಯನ್ನು ಸಂಘ ದಾನವಾಗಿ ಭಿಕ್ಖುಗಳಿಗೆ ನೀಡಲು ಸೂಚಿಸಿದರು. ನಾನೇನು ಮಾಡಲು ಸಾಧ್ಯ? ಭಾರವಾದ ಹೃದಯದಿಂದ ಸಯಾಜಿಯವರ ಅಲ್ಪ ಮೊತ್ತದ ಸಂಪೂರ್ಣ ಪಿಂಚಣಿಯನ್ನು ಸಾಲ ತೀರುವವರೆಗೆ ಸ್ವೀಕರಿಸಬೇಕಾಯಿತು. ಇಂದು ನಾನು ಈ ಮೇರು ವ್ಯಕ್ತಿಯ ಆದರ್ಶಗಳನ್ನು ಜ್ಞಾಪಿಸಿಕೊಳ್ಳುತ್ತೇನೆ ಮತ್ತು ಉತ್ತೇಜನ ಪಡೆಯುತ್ತೇನೆ.

ನನ್ನ ಸತ್ಯವಂತ ಮತ್ತು ಸಂತ ಆಚಾರ್ಯರಾದ ಸಯಾಜಿ ಉ ಬಾ ಖಿನ್‌ರವರು ಸ್ತುತ್ಯಾರ್ಹರು. ಅವರು ತೋರಿಸಿದ ಮಾರ್ಗದಲ್ಲಿ ನಡೆಯಲು ನಾನು ಬಹಳ ಅದೃಷ್ಟ ಮಾಡಿದ್ದೆ. ಧರ್ಮವು ಸ್ತುತ್ಯಾರ್ಹ. ಅವರು ನಮಗೆ ನೀಡಿದ ಧರ್ಮದ ಅಭ್ಯಾಸವೂ ಶ್ಲಾಘನೀಯ.

ಧರ್ಮವನ್ನು ಅಭ್ಯಾಸ ಮಾಡಿ ಎಲ್ಲರೂ ಸಂತೋಷವಾಗಿರಲಿ!
ಎಲ್ಲರೂ ಶಾಂತಿಯಿಂದಿರಲಿ !
ಎಲ್ಲರೂ ಮುಕ್ತರಾಗಲಿ !

**ಗೋಯಂಕಜಿಯವರೊಡನೆ ಪ್ರಶ್ನೋತ್ತರಗಳು :**
**(ಫಾರ್ ದ ಬೆನಿಫಿಟ್ ಆಫ್ ಮೆನಿ' ಇಂಗ್ಲೀಷ್ ಪುಸ್ತಕದಿಂದ)**

**ಪ್ರಶ್ನೆ :** ಧರ್ಮವನ್ನು ಹರಡುವುದರಲ್ಲಿ ನಾವು ಏನು ಕೊಡುಗೆ ನೀಡಬಹುದು?

**ಗೋಯಂಕಜಿ :** ಅತ್ಯುತ್ತಮವಾದ ಕೊಡುಗೆ ಎಂದರೆ ನಿಮಗೆ ನೀವೇ ಸಹಾಯ ಮಾಡಿಕೊಳ್ಳುವುದು. ಧರ್ಮದಲ್ಲಿ ಸ್ಥಾಪಿತರಾಗಿ ಮತ್ತು ನಿಮ್ಮ ಜೀವನದ ರೀತಿಯನ್ನು ನೋಡಿ ಜನರು ಧರ್ಮವನ್ನು ಮೆಚ್ಚಿಕೊಳ್ಳುವಂತೆ ನೋಡಿಕೊಳ್ಳಿ. “ನೋಡಿ, ಧರ್ಮಕ್ಕೆ (ವಿಪಶ್ಯನಕ್ಕೆ) ಹೋಗುವ ಮೊದಲು, ಈ ವ್ಯಕ್ತಿಯು ಒಂದು ರೀತಿ ಇದ್ದರು, ಈಗ ಎಂತಹ ದೊಡ್ಡ ಬದಲಾವಣೆ ಬಂದಿದೆ! ಉತ್ತಮವಾದ ಬದಲಾವಣೆ ಬಂದಿದೆ.” ಈ ವ್ಯಕ್ತಿಯಲ್ಲಿ ಬದಲಾವಣೆ ಇಲ್ಲದಿರುವುದನ್ನು ಕಂಡರೆ, ಅಥವಾ ಅವನು ಅಥವಾ ಅವಳು ಕೆಟ್ಟವರಾದರೆ ಮತ್ತು “ನಾನೊಬ್ಬ ದೊಡ್ಡ ವಿಪಶ್ಯನ ಸಾಧಕ ; ನಾನು ಬಹಳ ಪರಿಶುದ್ಧನಾದ ವ್ಯಕ್ತಿ” ಎಂದು ಯೋಚಿಸುತ್ತಾ ಅಹಂಕಾರ ಉತ್ಪತ್ತಿ ಮಾಡಿಕೊಳ್ಳಲು ಪ್ರಾರಂಭಿಸಿದರೆ, ಜನರು ಧರ್ಮದಿಂದ (ವಿಪಶ್ಯನದಿಂದ) ದೂರ ಓಡುತ್ತಾರೆ. ಧರ್ಮವನ್ನು ಹರಡುವ ಪ್ರಯತ್ನದಲ್ಲಿ ಯಾವ ಉದ್ದೇಶವೂ ಈಡೇರುವುದಿಲ್ಲ.

ಪ್ರತಿಯೊಬ್ಬ ವಿಪಶ್ಯನ ಧ್ಯಾನ ಸಾಧಕನೂ ಧರ್ಮದ ಪ್ರತಿನಿಧಿ. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಯು ತುಂಬಾ ಎಚ್ಚರಿಕೆಯಿಂದಿರಬೇಕು. ವ್ಯಕ್ತಿಯು ವಿಪಶ್ಯನ ಧ್ಯಾನ ಸಾಧಕನಾಗಿದ್ದರೆ, ಅಥವಾ ಯಾರಾದರೂ ವಿಪಶ್ಯನ ಸಂಸ್ಥೆಯಲ್ಲಿ ದೊಡ್ಡ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರೆ, ಆಗ ಆ ವ್ಯಕ್ತಿಯು ಪ್ರಸಿದ್ಧ ವ್ಯಕ್ತಿಯಾಗುತ್ತಾನೆ. ಜನರು ನಿಮ್ಮನ್ನು, ನಿಮ್ಮ ನಡವಳಿಕೆಯನ್ನು, ನಿಮ್ಮ ಜೀವನ ಕ್ರಮವನ್ನು, ನೀವು ವ್ಯವಹರಿಸುವ ರೀತಿಯನ್ನು ನೋಡುತ್ತಾರೆ. ಅವರು ನಿಮ್ಮಲ್ಲಿ ನ್ಯೂನತೆಗಳನ್ನು ಕಂಡರೆ, ಅದು ಜನರನ್ನು ಧರ್ಮದಿಂದ ಓಡಿಹೋಗುವಂತೆ ಮಾಡುತ್ತದೆ. ಜನರನ್ನು ಪ್ರೋತ್ಸಾಹಿಸಲು, ಸ್ವತಃ ನೀವೇ ಆದರ್ಶ ಜೀವನವನ್ನು ನಡೆಸುವುದು ಅತ್ಯುತ್ತಮವಾದ ಕೆಲಸ. ಇದರಿಂದ ಜನರು ಪ್ರೇರೇಪಿತರಾಗುತ್ತಾರೆ.

ಇಂತಹದ್ದೊಂದು ನಡೆಯುತ್ತಿದೆ ಎಂದು ಜನರಿಗೆ ಮಾಹಿತಿ ಕೊಡುವುದು, ಒಂದು ಧ್ಯಾನ ಸಾಧನೆಯಿದೆ ಅದು ದುಃಖದಿಂದ ಹೊರಬರಲು ನಮಗೆ ಸಹಾಯ ಮಾಡುತ್ತದೆ ಎಂಬ ಮಾಹಿತಿ ಬಹಳ ಮುಖ್ಯ. ಪಶ್ಚಿಮದ ದೇಶಗಳಲ್ಲಿ ಕೆಲವು ಜನರನ್ನು ಸೇರಿಸಿ ಭಾಷಣ ಮಾಡುವುದು, ವೀಡಿಯೋ ತೋರಿಸುವುದು, ಜನರ ಪ್ರಶ್ನೆಗಳಿಗೆ ಉತ್ತರಿಸುವ ಕೆಲಸವನ್ನು ನೀವು ಆರಂಭಿಸಿದ್ದೀರಿ. ಈ ರೀತಿಯಾಗಿಯೂ ಜನರು ಧರ್ಮದ ಬಗ್ಗೆ ತಿಳಿಯಬೇಕು. ಅಧಿಕ ಸಂಖ್ಯೆಯ ಜನರಿಗೆ, ಇಂತಹದ್ದೊಂದು ಧ್ಯಾನಮಾರ್ಗ ಇದೆ ಎಂಬುದೇ ತಿಳಿದಿಲ್ಲ. ಇದರ ಮಾಹಿತಿಯನ್ನು ಬಹಳ ವಿನಮ್ರತೆಯಿಂದ ಕೊಡಬೇಕು. ಇದು ಸಹಾಯ ಮಾಡುತ್ತದೆ (ಪುಟ 93).

**ಪ್ರಶ್ನೆ :** ಸಾಮಾಜಿಕ ಬದಲಾವಣೆಯಲ್ಲಿ ವಿಪಶ್ಯನವು ಪ್ರಮುಖ ಪಾತ್ರವಹಿಸುತ್ತದೆ. 1969 ರಿಂದ ನೀವು ಅದನ್ನು ಹರಡುತ್ತಿದ್ದೀರಿ. ಆದರೂ ಜಾತೀಯತೆ, ಕೋಮುವಾದ ಮತ್ತು ಪಂಥೀಯತೆ ನಿರಂತರವಾಗಿ ಹೆಚ್ಚುತ್ತಿದೆ. ಈ ಅನಿಷ್ಟಗಳನ್ನು ನಿರ್ಮೂಲಮಾಡಲು ಏನಾದರೂ ಸಲಹೆ ಕೊಡುವಿರಾ?

**ಉತ್ತರ :** 'ಏಕಾಯನೊ ಮಗ್ಗೊ' ಅಂದರೆ ಒಂದೇ ಒಂದು ಮಾರ್ಗವಿದೆ. ಆ ಮಾರ್ಗವೆಂದರೆ ಪ್ರತಿಯೊಬ್ಬ ವ್ಯಕ್ತಿಯನ್ನೂ ಬದಲಾಯಿಸುವುದು. ನೀವು ಸಮಾಜವನ್ನು ಬದಲಾಯಿಸಬೇಕಾದರೆ ವ್ಯಕ್ತಿಯನ್ನು ನೀವು ಬದಲಾಯಿಸಬೇಕು. ಅಷ್ಟಕ್ಕೂ ಸಮಾಜವೆಂದರೆ ವ್ಯಕ್ತಿಗಳ ಸಮೂಹವಲ್ಲದೆ ಬೇರೇನೂ ಅಲ್ಲ. ಪ್ರತಿಯೊಬ್ಬ ವ್ಯಕ್ತಿಯು ಮುಖ್ಯ. ನೀವು ಮನುಷ್ಯನ ಬಗ್ಗೆ ಹೇಳುವುದಾದರೆ, ಅವನು ಶರೀರ ಮತ್ತು ಮನಸ್ಸಿನ ಒಟ್ಟುಗೂಡುವಿಕೆಯಲ್ಲದೆ ಬೇರೇನೂ ಅಲ್ಲ. ಇವೆರಡರಲ್ಲಿ

RNI. No. : KARKAN/2015/68727. Postal Regn. No.: RNP/KA/BGS/2253/2020-22
Published On 10th & Posted On 20th of Everymonth. Posted At : Bengaluru PSO, B'luru 26. Price(Annual)Rs.30.

ಮನಸ್ಸೇ ಬಹಳ ಮುಖ್ಯ.

ಹಾಗಾಗಿ, ಮನಸ್ಸೇ ಬಹಳ ಮುಖ್ಯವಾಗಿರುವುದರಿಂದ ಈ ಎಲ್ಲಾ ಜಾತೀಯತೆ, ಕೋಮುವಾದ ಮತ್ತು ಪಂಥೀಯತೆಯ ಕಾರಣದಿಂದ ಉಂಟಾಗುವ ದುಃಖದಿಂದ ಹೊರಬರಲು ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಮನಸ್ಸಿನ ನಡವಳಿಕೆಯನ್ನು ಬದಲಾಯಿಸಬೇಕು ಎಂಬುದನ್ನು ಅರ್ಥ ಮಾಡಿಕೊಳ್ಳಲು ನಾವು ಜನರಿಗೆ ಸಹಾಯ ಮಾಡಬೇಕು. ಸಮಾಜದ ಈ ಅನಿಷ್ಟಗಳ ಕಾರಣದಿಂದ ಜನರು ಹೇಗೆ ನಕಾರಾತ್ಮಕತೆಯನ್ನು ಉತ್ಪತ್ತಿ ಮಾಡಿಕೊಳ್ಳುತ್ತಾರೆ ಎಂಬುದನ್ನು ಅವರಿಗೆ ತೋರಿಸಬೇಕು.

ನೀವು ವಿಪಶ್ಯನವನ್ನು ಕಲಿತು ನಿಮ್ಮೊಳಗೇ ನೀವು ನೋಡಿದಾಗ, "ನೋಡು, ನಾನು ದ್ವೇಷ ಉತ್ಪತ್ತಿ ಮಾಡಿಕೊಂಡ ತಕ್ಷಣ ನನಗೆ ನಾನೇ ಹಾನಿಮಾಡಿಕೊಳ್ಳುತ್ತೇನೆ. ಬೇರೆಯವರಿಗೆ ಹಾನಿ ಮಾಡುವ ಮೊದಲೇ, ನೋಡು, ನಾನು ನೋವನುಭವಿಸುತ್ತೇನೆ" ಎಂಬುದನ್ನು ಅರ್ಥ ಮಾಡಿಕೊಳ್ಳುತ್ತೀರಿ.

ನೋವನುಭವಿಸುವುದನ್ನು ಜನರು ಇಷ್ಟಪಡುವುದಿಲ್ಲ. ಆದರೆ ಪ್ರತಿಬಾರಿ ಮನಸ್ಸಿನಲ್ಲಿ ನಕಾರಾತ್ಮಕತೆಯನ್ನು ಉತ್ಪತ್ತಿ ಮಾಡಿಕೊಂಡಾಗ ತಮಗೆ ತಾವೇ ಹಾನಿ ಮಾಡಿಕೊಳ್ಳುತ್ತಾರೆ ಎಂಬುದನ್ನು ಅವರು ಅರಿಯುವುದಿಲ್ಲ. ವ್ಯಕ್ತಿಯು ನಕಾರಾತ್ಮಕತೆಯನ್ನು ಉತ್ಪತ್ತಿ ಮಾಡಿ ಕೊಂಡಾಗ ಅದರ ಮೊದಲ ಬಲಿ ಅವನೇ. ಹೆಚ್ಚು ಹೆಚ್ಚು ಜನರು ಇದನ್ನು ಮನಗಾಣಲು ಪ್ರಾರಂಭಿಸಿದರೆ, ಅವರು ನೋವಿನಿಂದ ಹೊರಬರುತ್ತಾರೆ. ಆದರೆ ಇದು ಸಮಯ ತೆಗೆದುಕೊಳ್ಳುತ್ತದೆ.

ಭಾರತವು ದೊಡ್ಡ ಜನಸಂಖ್ಯೆಯ ದೇಶ. ಇಡೀ ದೇಶವೇ ಈ 25–26 ವರ್ಷಗಳಲ್ಲಿ (1969 ರಿಂದ 1995) ಬದಲಾಗಬೇಕಿತ್ತು ಎಂದು ನೀವು ನಿರೀಕ್ಷಿಸಬಾರದು. ಆದರೆ ನನಗೆ ಬಹಳ ಆಶಾಭಾವನೆಯಿದೆ. ಏಕೆಂದರೆ ಆರಂಭ ಮಾಡಲಾಗಿದೆ. ಕಳೆದ 2000 ವರ್ಷಗಳವರೆಗೆ ಈ ಅದ್ಭುತವಾದ ಪ್ರಕೃತಿಯ ನಿಯಮವು, ಧರ್ಮವು, ನಮಗೆ ಲಭ್ಯವಿರಲಿಲ್ಲ. ಅದೃಷ್ಟವಶಾತ್ ಪಕ್ಕದ ರಾಷ್ಟ್ರವು ಇದನ್ನು ಪೀಳಿಗೆಯಿಂದ ಪೀಳಿಗೆಗೆ, ಕೆಲವೇ ಜನಗಳಲ್ಲಾದರೂ ಪರಿಶುದ್ಧ ರೂಪದಲ್ಲಿ ಕಾಪಾಡಿತು. ಈಗ ನಾವು ಇದನ್ನು ಅದರ ಪರಿಶುದ್ಧ ರೂಪದಲ್ಲಿ ಪಡೆದಿದ್ದೇವೆ.

ಈಗ ನಾವು ಕಾಣುವ ಫಲಗಳು ಸಮಾಜದ ಮೇಲೆ ಪರಿಣಾಮ ಬೀರುತ್ತವೆ ಎಂಬುದರಲ್ಲಿ ನನಗೆ ದೃಢವಾದ ನಂಬಿಕೆಯಿದೆ. ಇಡೀ ಕಾಡೇ ಒಣಗಿ ಹೋಗಿದ್ದರೆ, ನೀವು ಅದನ್ನು ಮತ್ತೊಮ್ಮೆ ಹಸಿರಾಗಿ ಮಾಡಬೇಕಾದರೆ, ಪ್ರತಿಯೊಂದು ಮರವೂ ಹಸಿರಾಗಬೇಕು. ಪ್ರತಿಯೊಂದು ಮರಕ್ಕೂ ಸರಿಯಾಗಿ ನೀರುಣಿಸಬೇಕು. ಪ್ರತಿಯೊಂದು ಮರವೂ ಆರೋಗ್ಯಕರವಾದರೆ, ಇಡೀ ಕಾಡೇ ಆರೋಗ್ಯಕರವಾಗುತ್ತದೆ. ವ್ಯಕ್ತಿಗಳು ಆರೋಗ್ಯವಂತರಾದರೆ, ಸಮಾಜವೂ ಆರೋಗ್ಯವಾಗುತ್ತದೆ. ವಿಪಶ್ಯನವು ತನ್ನ ಕೆಲಸ ತಾನು ಮಾಡುತ್ತಿದೆ. ಅದು ಸಮಯ ತೆಗೆದುಕೊಳ್ಳಬಹುದು, ಅದಕ್ಕೇನೂ ಮಾಡಲಾಗುವುದಿಲ್ಲ. ಆದರೆ ಫಲಿತಾಂಶಗಳು ಬರುತ್ತಿವೆ ಮತ್ತು ಸಮಾಜ ಬದಲಾಗುತ್ತದೆ ಎಂಬ ಆಶಾಭಾವನೆ ನನಗಿದೆ.

## ಧಮ್ಮ ಪಫುಲ್ಲಾ, ಬೆಂಗಳೂರು

**10 ದಿನದ ಶಿಬಿರಗಳು** : 2022 : ಜೂನ್ 1–12, 15–26, 29–10 ಜುಲೈ 13–24, 27–7 ಆಗಸ್ಟ್ 10–21, ಸೆಪ್ಟಂಬರ್ 13–24, 28–9 ಅಕ್ಟೋಬರ್ 12–23, 26–6 ನವೆಂಬರ್.

**ವಿಳಾಸ :** ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಎದುರಿನ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ ಬಸ್ ನಿಲ್ದಾಣದಿಂದ (ಮೆಜೆಸ್ಟಿಕ್) ನಗರ ಸಾರಿಗೆ ಬಸ್ ಸಂಖ್ಯೆ : 256, 258, 258 ಸಿ. ಸಂಪರ್ಕ ಸಂಖ್ಯೆಗಳು: 99725 88377, 63615 70725, 99725 88377, 99009 55930. ಇ–ಮೇಲ್ : info@paphulla. dhamma. org;website; www. vridhamma.org.

### ಧಮ್ಮ ನಗರಿ ವಿಪಶ್ಯನ ಧ್ಯಾನ ಕೇಂದ್ರ ದಾವಣಗೆರೆ.

**10 ದಿನದ ಶಿಬಿರಗಳು :**–2022 ಮೇ 18–29, ಜೂನ್ 8–19, 29–10 ಜುಲೈ, ಆಗಸ್ಟ್ , 17–28, ಸೆಪ್ಟಂಬರ್ 7–18.ಮೂರು ದಿನದ ಶಿಬಿರ(ಹಳೆಯ ಧ್ಯಾನಾರ್ಥಿಗಳಿಗೆ ಮಾತ್ರ): ಜುಲೈ 28ರ ಸಾಯಂಕಾಲದಿಂದ 31ರ ಸಾಯಂಕಾಲದವರೆಗೆ. ನೋಂದಣಿ ಮಾಡಿಕೊಳ್ಳಲು ಈ ಮುಂದಿನ ಲಿಂಕ್ ಅನ್ನು ಉಪಯೋಗಿಸಿಕೊಳ್ಳಿ :

https://www.dhamma.org/en/schedules/v2/noncenter/davanagere.in#normal.

**ನೋಂದಣಿ ಸಹಾಯ ಬೇಕಾದರೆ ಸಂಪರ್ಕಿಸಿ :** ಅಭಿಷೇಕ ರಾಮ್ +91 90087 33008

### ಧಮ್ಮ ನದಿ, ವಿಪಶ್ಯನ ಧ್ಯಾನಕೇಂದ್ರ ಉಡುಪಿ ಜಿಲ್ಲೆ

ನಿರ್ಮಾಣ ಕೇಂದ್ರ ಆರಂಭವಾಗಿದೆ. ಪ್ರತಿ ಭಾನುವಾರ ಬೆಳಿಗ್ಗೆ 9 ರಿಂದ 1 ರವರೆಗೆ ಧ್ಯಾನ ಕಾರ್ಯಕ್ರಮ ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 9449773942, 9880173542, 8792173942.

### ಧಮ್ಮ ಸುಖಾಲಯ, ಬೆಂಗಳೂರು.

ಪ್ರತಿ ಭಾನುವಾರ ಒಂದು ದಿನದ ಶಿಬಿರವಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಪ್ರಕಾಶ್‌ಚಂದ್ರ 89898 66927, ಚೆಲುವರಾಜು 9900452939, ಸಂತೋಷ್ ಧರ್ಮರಾಜ್ 8762086089 ನೋಂದಣಿಗೆ : https:/sukhalaya. dhamma.org/en/tapodana.

ದಾರಿ ತೋರಿಸಲು: https://maps.app.goo.gl/EVGKU

### ಧಮ್ಮವನ, ಅಂತರರಾಷ್ಟ್ರೀಯ ವಿಪಶ್ಯನ ಧ್ಯಾನಕೇಂದ್ರ, ನಾಡಪ್ಪನಹಳ್ಳಿ – 571 617, ಮೈಸೂರು ಜಿಲ್ಲೆ.

ನಿರಂತರಾಗಿ 2 ಮತ್ತು ಮೂರು ದಿನದ ಶಿಬಿರಗಳನ್ನು ಆಯೋಜಿಸ ಲಾಗುತ್ತಿದೆ. ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳಲು: www.dhamma.org/schedules/schvana.

ಹೆಚ್ಚಿನ ಮಾಹಿತಿಗೆ : 88805 19658

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು: ಬಿ.ಪ್ರದೀಪ ಕುಮಾರ, ಪ್ರಕಾಶಕರು: ಶ್ರೀಮತಿ ಆರ್. ಚಂದ್ರಮತಿ** ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ. **ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070. **ಗೌರವ ಸಂಪಾದಕರು: ಜಿ.ಟಿ. ಗೋವಿಂದಪ್ಪ**

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor: G.T. Govindappa,**

ಇಂದ:
**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.

ಗೆ,